# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಮಾನ್ಯ ಸದಸ್ಯರ ಹೆಸರು | ಶ್ರೀ ಹೆಚ್ ಪಿ ಸುಧಾಮ್ ದಾಸ್ (ನಾಮ ನಿರ್ದೇಶಿತರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1191 |
| ಉತ್ತರಿಸಬೇಕಾದ ದಿನಾಂಕ | 17.12.2025 |
| ಉತ್ತರಿಸಬೇಕಾದ ಸಚಿವರು | ವಸತಿ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರದ ಕಾಡುಗೊಂಡನಹಳ್ಳಿ, ಸರ್ವೆ ನಂ.71ರ 28.8 ಗುಂಟೆ ಜಾಗದಲ್ಲಿ ಸ್ಲಂ ಡೆವೆಲಪ್ಮೆಂಟ್ ಬೋರ್ಡ್‌ನಿಂದ ಹಕ್ಕು ಪತ್ರ ಪಡೆದು ಬಿ.ಬಿ.ಎಂ.ಪಿ ಯ ಒಂಟಿ ಮನೆ ಯೋಜನೆಯಡಿ 2015-16 ಹಾಗೂ 2016-17 ರ ಸಾಲಿನಲ್ಲಿ ತಲಾ ರೂ.3 ಲಕ್ಷ ಅನುದಾನದಲ್ಲಿ ಬಹುತೇಕ ಪರಿಶಿಷ್ಟ ಜಾತಿಯವರೇ ನಿರ್ಮಿಸಿ ವಾಸಿಸುತ್ತಿದ್ದ ಮನೆಗಳನ್ನು ದಿನಾಂಕ:31.10.2025 ಹಾಗೂ 01.11.2025 ರಂದು ರೈಲ್ವೆ ಇಲಾಖೆಯವರು ಪೋಲೀಸ್ ಸಿಬ್ಬಂದಿಯವರ ಸಹಯೋಗದೊಂದಿಗೆ ಕೆಡವಿಹಾಕಿ ಹೋಗಿದ್ದು ನಿವಾಸಿಗಳೆಲ್ಲರೂ ಸೂರು ಕಳೆದುಕೊಂಡು ನಿರ್ಗತಿಕರಾಗಿ ಬೀದಿಗೆ ಬಿದ್ದಿರುವ ಮಾಹಿತಿ ಸರ್ಕಾರದ ಗಮನಕ್ಕೆ ಬಂದಿದೆಯೇ; | ಬೆಂಗಳೂರು ನಗರದ ಸರ್ವಜ್ಞನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಬರುವ ಕಾಡುಗೊಂಡನಹಳ್ಳಿ ಗ್ರಾಮದ ಸರ್ವೆ ನಂ.71 ರಲ್ಲಿ 0-22 ಗುಂಟೆ ವಿಸ್ತೀರ್ಣದಲ್ಲಿರುವ ಚುನಾ ಲೇನ್-1 ಪ್ರದೇಶವನ್ನು ಮಂಡಳಿ ಕಾಯ್ದೆ ಕಲಂ-3 ರಡಿ ಕೊಳಚೆ ಪ್ರದೇಶವೆಂದು ದಿನಾಂಕ:18.12.2017ರಂದು ಘೋಷಣೆಯಾಗಿದೆ. ಸದರಿ ಪ್ರದೇಶದಲ್ಲಿ ವಾಸಿಸುತ್ತಿರುವ 77 ಕುಟುಂಬಗಳಿಗೆ ಮಂಡಳಿ ವತಿಯಿಂದ ಪರಿಚಯ ಪತ್ರ (ID Card) ವಿತರಿಸಲಾಗಿರುತ್ತದೆ.<br><br>ಸದರಿ ಕೊಳಚೆ ಪ್ರದೇಶವನ್ನು ದಿನಾಂಕ:06.02.2018ರಂದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಗೆ ಹಸ್ತಾಂತರ ಪಡೆಯಲಾಗಿರುತ್ತದೆ. ಸದರಿ ಪ್ರದೇಶದಲ್ಲಿ ಮಂಡಳಿ ವತಿಯಿಂದ ಮನೆಗಳನ್ನು ನಿರ್ಮಿಸಿರುವುದಿಲ್ಲ. ಇದರ ವ್ಯಾಪ್ತಿಯಲ್ಲಿ ನಿವಾಸಿಗಳೇ ನಿರ್ಮಿಸಿಕೊಂಡಿರುವ ಮನೆಗಳನ್ನು ರೈಲ್ವೆ ಇಲಾಖೆಯವರು ತೆರವುಗೊಳಿಸಿರುವುದಿಲ್ಲ. ಸದರಿ ಸರ್ವೆ ನಂಬರ್‌ನಲ್ಲಿ ಬಿ.ಬಿ.ಎಂ.ಪಿ ವತಿಯಿಂದ ಒಂಟಿ ಯೋಜನೆಯಡಿ ಮನೆಗಳನ್ನು ನಿರ್ಮಿಸಿರುತ್ತಾರೆ. |
| ಆ) | ಕಾನೂನು ಬದ್ಧವಾಗಿ ವಸತಿ ಇಲಾಖೆಯಡಿ ಬರುವ ಸರ್ಕಾರಿ ಬೋರ್ಡ್ ಒಂದರಿಂದ ನಿವೇಶನ ಪಡೆದು ಪಾಲಿಕೆಯ ಅನುದಾನದಲ್ಲಿ ಮನೆ ನಿರ್ಮಿಸಿ ಈಗ ಕುಟುಂಬದೊಂದಿಗೆ ಬೀದಿಗೆ ಬಿದ್ದಿರುವ ನಿವಾಸಿಗಳಿಗೆ ಪರ್ಯಾಯ ವಸತಿ ಒದಗಿಸಲು ಹಾಗೂ ಅವರಿಗುಂಟಾಗಿರುವ ಅನ್ಯಾಯ ಅನಾನುಕೂಲಗಳಿಗೆ ಪರಿಹಾರ ಒದಗಿಸಲು ಕೈಗೊಂಡಿರುವ ಕ್ರಮಗಳೇನು; | ಬೆಂಗಳೂರು ನಗರದ ಕಾಡುಗೊಂಡನಹಳ್ಳಿ, ಸರ್ವೆ ನಂ.70ರ ಜಾಗದಲ್ಲಿ ರೈಲು ಹಳಿ ಹಾದುಹೋಗಿದ್ದು, ರೈಲು ಹಳಿಯ ಪಕ್ಕದಲ್ಲಿರುವ ಜಾಗದಲ್ಲಿ ಬಿ.ಬಿ.ಎಂ.ಪಿ ವತಿಯಿಂದ ಒಂಟಿ ಮನೆ ಯೋಜನೆಯಡಿಯಲ್ಲಿ ಮನೆಗಳನ್ನು ನಿರ್ಮಿಸಿದ್ದು, ಈ ಜಾಗವು ರೈಲ್ವೆ ಇಲಾಖೆಯ ಸುಪರ್ದಿಯಲ್ಲಿದ್ದು, ಇಲ್ಲಿನ ಮನೆಗಳನ್ನು ರೈಲ್ವೆ ಇಲಾಖೆಯವರು ತೆರವುಗೊಳಿಸಿರುವುದು ಕಂಡು ಬಂದಿರುತ್ತದೆ.<br><br>ಆದ್ದರಿಂದ, Railway Buffer ಪ್ರದೇಶದಲ್ಲಿ ಬಿ.ಬಿ.ಎಂ.ಪಿ ವತಿಯಿಂದ ಮನೆಗಳನ್ನು ನಿರ್ಮಿಸಿರುವ ಹಿನ್ನೆಲೆಯಲ್ಲಿ ಸದರಿ ನಿವಾಸಿಗಳಿಗೆ ಪರ್ಯಾಯ ವ್ಯವಸ್ಥೆ ಕಲ್ಪಿಸುವ ಕುರಿತು ಬಿ.ಬಿ.ಎಂ.ಪಿ (ಗ್ರೇಟರ್ ಬೆಂಗಳೂರು ಪ್ರಾಧಿಕಾರ) ವತಿಯಿಂದ ಪರಿಶೀಲಿಸಿ ನಿಯಮಾನುಸಾರ ಮುಂದಿನ ಕ್ರಮ ಕೈಗೊಳ್ಳಬೇಕಾಗಿರುತ್ತದೆ. |
| ಇ) | ವಸತಿ ಇಲಾಖೆಯಿಂದ ಪರ್ಯಾಯ ಖಾಯಂ ವಸತಿ ಸೌಲಭ್ಯ ಒದಗಿಸುವವರೆಗೆ ಸದರಿ ಸಂತ್ರಸ್ತ ಕುಟುಂಬಗಳ ವಾಸಕ್ಕೆ ವಸತಿ ಇಲಾಖೆ ಕೈಗೊಂಡಿರುವ ತಾತ್ಕಾಲಿಕ ವ್ಯವಸ್ಥೆ ಏನು? (ವಿವರ ಒದಗಿಸುವುದು) | |

ಸಂಖ್ಯೆ: ವಇ 197 ಹೆಚ್‌ಎಫ್‌ಎ 2025]

(ಬಿ.ಝಡ್. ಜಮೀರ್ ಅಹಮದ್ ಖಾನ್)
ವಸತಿ ಸಚಿವರು.